ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೨೫ನೇ ಫೆಬ್ರುವರಿ ೧೯೮೬ ಫಾಲ್ಗುಣ ೬, ೧೯೦೭. ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಉಪಾಧ್ಯಕ್ಷರು (ಶ್ರೀ ಲಕ್ಷ್ಮೀನರಸಿಂಹಯ್ಯ) ಪೀಠವನ್ನು ಅಲಂಕರಿಸಿದ್ದರು].

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಧಾರವಾಡದಲ್ಲಿರುವ ಪ್ರಾಣಿ ಸಂಗ್ರಹಾಲಯದ ಪ್ರಮಾಣವನ್ನು ಹೆಚ್ಚಿಸುವುದು

೧೨೨೭. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಮೊದಲಿನಿಂದ ಅರಣ್ಯ ಇಲಾಖೆಯ ಪ್ರಮುಖ ವಿಭಾಗವಾಗಿರುವುದರಿಂದ ಈ ನಗರದಲ್ಲಿ ಮಾದರಿಯ ಪ್ರಾಣಿ ಸಂಗ್ರಹಾಲಯದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈಗ ಇರುವುದರ ಪ್ರಾಣಿ ಸಂಗ್ರಹಾಲಯದ ಪ್ರಮಾಣ ಹೆಚ್ಚಿಸುವ ಬಗ್ಗೆ ಸರ್ಕಾರದವರು ಯೋಚಿಸುವರೇ?

ಆ) ಧಾರವಾಡ ಸಮೀಪದ ಅರಣ್ಯದಲ್ಲಿ 'ಸಫಾರಿ' ಪ್ರಾಣಿ ಸಂಗ್ರಹಾಲಯ ಮಾಡಲು ಅರಣ್ಯ ಇಲಾಖೆ ಧಾರವಾಡ ಶಿಫಾರಸ್ಸು ಮಾಡಿದ್ದಾರೆಯೇ ಹಾಗಿದ್ದಲ್ಲಿ ಅದರ ಅಗತ್ಯ ಗುರ್ತಿಸಿ ಕ್ರಮ ಕೈಗೊಳ್ಳುವರೆ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಅ) ೧೯೭೨ರಲ್ಲಿ ಅರಣ್ಯ ಇಲಾಖೆಯು ತಮ್ಮ ಧಾರವಾಡ ಕಛೇರಿ ಆವರಣದಲ್ಲಿ ಗಾಂಧಿ ಸ್ಮಾರಕ ಮೃಗಾಲಯವನ್ನು ಸ್ಥಾಪಿಸಲಾಗಿದೆ. ಈ ಮೃಗಾಲಯವನ್ನು ಸ್ಥಳವಿಲ್ಲದ ಕಾರಣ ವಿಸ್ತರಿಸಲು ಅವಕಾಶವಿರುವುದಿಲ್ಲ,

ಆ) ಸಸ್ಯಹಾರಿ ಪ್ರಾಣಿಗಳ (ಹರಬಿಹೋರಾ) ಸಫಾರಿಯನ್ನು ಗುಂಗರಗಟ್ಟಿಯಲ್ಲಿ ತೆರೆಯಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಧಾರವಾಡ ಅವರು ೧೯೮೨ರಲ್ಲಿ ಇಚ್ಛಿಸಿದ್ದರು. ಆದರೆ ಇದಕ್ಕೆ ಸಾಕಷ್ಟು ಹಣ ಇಲ್ಲದ ಕಾರಣ ಕಾರ್ಯ ರೂಪಕ್ಕೆ ತರಲಾಗಲಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಧಾರವಾಡ ಸಮೀಪದಲ್ಲಿ ಮೂರರಿಂ ಕಿಲೋಮೀಟರ್ ದೂರದಲ್ಲಿ ಒಂದು ಅರಣ್ಯ ಇದೆ. ಅಲ್ಲಿ ಪಶುಸಂಗ್ರಹಾಲಯ ಮಾಡಿದರೆ ಚೆನ್ನಾಗಿ ಆಗುತ್ತದೆ ಎಂದು ಇಲಾಖೆಯವರಿಂ ಅಪೇಕ್ಷೆಪಡುತ್ತಿದ್ದಾರೆ. ಇದನ್ನು ಏತಕ್ಕೆ ಮಾಡಬಾರದು?

ಶ್ರೀ ಬಿ.ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—ಅಧ್ಯಕ್ಷರೇ ಈಗಾಗಲೇ ಸಂತೂರ ಕಾಡಿನಲ್ಲಿ ಪ್ರಾಣಿಸಂಗ್ರಹಾಲಯ ಮಾಡಲಾಗಿದ್ದು ಇದಕ್ಕೆ ೧೪ ಲಕ್ಷ ರೂಪಾಯಿ ಖರ್ಚಾಗಿದೆ. ಇನ್ನೊಂದು ಧಾರವಾಡದಲ್ಲಿ ಸರ್ವೆ ನಂಬರ್ ೫೭ರಲ್ಲಿ ಪ್ರಾಣಿಸಂಗ್ರಹಾಲಯ ತೆರೆಯಬೇಕೆಂದು ಪರಿಶೀಲನೆ ಮಾಡಲಿಕ್ಕೆ

ಸಾಧ್ಯವಿಲ್ಲ. ಹಣದ ಕೊರತೆಯಿಂದ ಮತ್ತು ಈಗಾಗಲೇ ೧೪ ಲಕ್ಷ ರೂಪಾಯಿ ಖರ್ಚಾಗಿರುವುದರಿಂದ ಇನ್ನೊಂದು ಪ್ರಾಣಿ ಸಂಗ್ರಹಾಲಯವನ್ನು ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಗದಗ್ ಹತ್ತಿರ ಏನು ಪ್ರಾಣಿಸಂಗ್ರಹಾಲಯ ಮಾಡುತ್ತಿದ್ದೀರಿ. ಅದು ಊರು ಬಿಟ್ಟು ಹೊರಗಡೆ ಇದೆ. ಅಲ್ಲಿಗೆ ಯಾರೂ ಹೋಗಲಿಕ್ಕೆ ಸಾಧ್ಯವಿಲ್ಲ. ಧಾರವಾಡ ಮಂಡಲಕ್ಕೆಂದ್ರ ಮತ್ತು ದೊಡ್ಡ ನಗರವಾಗಿದೆ. ಇಂತಹ ಕಡೆ ಪ್ರಾಣಿ ಸಂಗ್ರಹಾಲಯ ಮಾಡಿದರೆ ಅತ್ಯಂತ ಸೂಕ್ತವಾಗಿರುತ್ತದೆ. ದುಡ್ಡು ಖರ್ಚುಮಾಡಿದರೂ ಪ್ರಯೋಜನ ಆಗಬೇಕು. ಹೀಗಿರುವಾಗ ಗದಗ್ ಸಮೀಪದಲ್ಲಿ ಪ್ರಾಣಿ ಸಂಗ್ರಹಾಲಯ ಮಾಡಿ ಏನು ಪ್ರಯೋಜನ?

ಶ್ರೀ ಬಿ. ಎ. ಜೀವಿಜಯ.—ವನ್ಯ ಪ್ರಾಣಿಗಳನ್ನು ರಕ್ಷಿಸುವ ಯೋಜನೆಯಲ್ಲಿ ಅರಣ್ಯ ಇಲಾಖೆಗೆ ೪೦ ಲಕ್ಷರೂಪಾಯಿಗಳಷ್ಟೇ ಸಿಗುತ್ತಿದೆ. ಆದ್ದರಿಂದ ಇದು ಸಾಧ್ಯವಾಗುವುದಿಲ್ಲ. ೧೯೭೨ನೇ ಇಸವಿಯಲ್ಲಿ ಗದಗ್‌ನಲ್ಲಿ ಪ್ರಾಣಿಸಂಗ್ರಹಾಲಯ ತೆರೆಯಬೇಕೆಂದು ಅಂದಿನ ಸರ್ಕಾರ ೫೪ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದೆ. ಈಗ ಯಾವ ಕಾರಣಕ್ಕೂ ಇದನ್ನು ಧಾರವಾಡಕ್ಕೆ ಸ್ಥಳಾಂತರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಧಾರವಾಡದಲ್ಲಿ ಇರತಕ್ಕ ಪ್ರಾಣಿ ಸಂಗ್ರಹಾಲಯವನ್ನೇ ಸ್ವಲ್ಪ ಇಂಪ್ರೂವ್ ಮಾಡಬೇಕೆಂದು ಪ್ರಯತ್ನಪಡುತ್ತಿದ್ದೇವೆ.

ಬ್ಯಾಡಗಿ ತಾಲ್ಲೂಕಿನಲ್ಲಿ ಅಂಗನವಾಡಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

೧೪೦೭. ಶ್ರೀ ಕೆ. ಎಸ್. ಬೀಳಗಿ (ಬ್ಯಾಡಗಿ):—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಡಗಿ ಕ್ಷೇತ್ರವು ಮೀಸಲು ಕ್ಷೇತ್ರವಿದ್ದರೂ ಅಂಗನವಾಡಿಗಳನ್ನು ತೆರೆಯದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ೧೯೮೬-೮೭ನೇ ಸಾಲಿನಲ್ಲಿ ಸದರಿ ತಾಲ್ಲೂಕಿಗೆ ಅಂಗನವಾಡಿ ಯೋಜನೆಯನ್ನು ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಬಂದಿದೆ.

ಆ) ಬ್ಯಾಡಗಿ ತಾಲ್ಲೂಕಿಗೆ ೭ನೇ ಪಂಚವಾರ್ಷಿಕ ಯೋಜನೆಯೊಳಗೆ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಉಪಾಧ್ಯಕ್ಷರು.—ಶ್ರೀ ಆರ್. ಎಸ್. ಮಾನೆ ಮತ್ತು ಶ್ರೀ ಕೆ. ಜಿ. ಜಾರ್ಜ್ ಅವರು ಸ್ವಲ್ಪ ಹೊತ್ತು ಬಿಟ್ಟು ಪ್ರಶ್ನೆ ಕೇಳಲಿ, ಮಂಡಲ ಮಂತ್ರಿಗಳು ಬರುತ್ತಾರೆ.

ಪ್ರಶ್ನೆ. ೧೬೨೧—ಮಾನ್ಯ ಸದಸ್ಯರಾದ ಶ್ರೀ ಜಿ. ಎಸ್. ಶಿವನಂಜಪ್ಪ ಅವರು ಹಾಜರಿಲ್ಲ.

ಉಪಾಧ್ಯಕ್ಷರು.—ಶ್ರೀ ಶ್ರೀರಂಗದೇವರಾಯಲು ಅವರು ಕೇಳಬೇಕಾಗಿದ್ದ ಪ್ರಶ್ನೆ ಸಂಖ್ಯೆ ೧೪೦೯—ಇದನ್ನು ತಡೆಹಿಡಿಯಲಾಗಿದೆ. ಮುಂದಿನ ಪ್ರಶ್ನೆಗೆ ಹೋಗೋಣ.

ದೇವರ ಕಾಡು ಅರಣ್ಯದಲ್ಲಿ ಮರಗಳನ್ನು ಕಡಿಯುವುದು

೧೬೩೯. ಶ್ರೀ ಡಿ. ಎ. ಚಿನ್ನಪ್ಪ (ಮಂಡಿಕೇರಿ):—ಮಾನ್ಯ ಅರಣ್ಯ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗಿನಲ್ಲಿ ಎಷ್ಟು ಎಕರೆ ದೇವರಕಾಡು ಅರಣ್ಯ ಇಲಾಖೆಯ ಅಧೀನದಲ್ಲಿದೆ?

ಆ) ಈ ಪೈಕಿ ದೇವರಕಾಡಿನಿಂದ ಎಷ್ಟು ಮರಗಳನ್ನು ಕಡಿಯಲಾಗಿದೆ. ಹಾಗೂ ಕಡಿದ ಮರಗಳ ಮೌಲ್ಯ ಎಷ್ಟು?

ಇ) ಮರ ಕಡಿದ ದೇವರ ಕಾಡುಗಳನ್ನು ಜನರು ಅಕ್ರಮ ಪ್ರವೇಶ ಮಾಡಿದ ಪ್ರದೇಶ ಎಷ್ಟು?